

ಹೇಳಿದ ಸುಂದರ್. ಸಿನಿಮಾಗಿಂತ ಸುಂದರ್ ಮುಖದಲ್ಲಿನ ಭಾವೋದ್ವೇಗಗಳನ್ನು ಆಶ್ಚರ್ಯದಿಂದ ನೋಡುತ್ತಿದ್ದಳು ಆಕೆ.

ಸಿನಿಮಾ ಟೈಟಲ್‌ಗಳೆಲ್ಲಾ ಚಿಕ್ಕದಾಗಿ ಟೈಪ್‌ರೈಟರ್ ಮೇಲೆ ಟೈಪ್ ಮಾಡಿದಂತಿದ್ದವು. ಅವರಲ್ಲಿ ಖ್ಯಾತರಾದವರು ಯಾರೂ ಇರಲಿಲ್ಲ. ನಿರ್ದೇಶಕನ ಹೆಸರು ಸತ್ಯಜಿತ್ ಮಹಾಪಾತ್ರ. ಹೊಸ ನಿರ್ದೇಶಕನೆಂದು ಗೈಡ್ ಹೇಳಿದ.

'ಒಬ್ಬ ಗಡಸು ದನಿಯ ಮನುಷ್ಯ ನೇಪಥ್ಯದಲ್ಲಿ ಕಥೆಯನ್ನು ಹೇಳುತ್ತಿದ್ದಾನೆ. ಕಥೆ ಫ್ಲಾಶ್‌ಬ್ಯಾಕ್‌ಗೆ ವಾಸ್ತವಕ್ಕೆ ಆಚೆ-ಈಚೆ ಓಡುತ್ತಿದೆ. ತೆರೆಯ ಮೇಲೆ ಈಗ ಐವತ್ತು ವರ್ಷ ವಯಸ್ಸಿನ ಮನುಷ್ಯ. ದುಃಖದಿಂದ ಕೂಡಿದ ಧ್ವನಿಯಲ್ಲಿ ಮಾತನಾಡುತ್ತಿದ್ದಾನೆ'.

ಗೈಡ್ ವಿವರಿಸುವ ರೀತಿ ಆಕೆಗೆ ಬೇಸರ ತರುತ್ತಿತ್ತು. 'ನನ್ನ ಹೆಂಡತಿ ಇನ್ನು ಮೂರು ತಾಸಿನಲ್ಲಿ ಸತ್ತು ಹೋಗುತ್ತಾಳೆ.' ತೆರೆಯ ಮೇಲೆ ಐವತ್ತು ವರ್ಷದ ಮನುಷ್ಯ ಹೇಳುತ್ತಿದ್ದ. ಗೈಡ್‌ನ ಮಾತುಗಳನ್ನು ಕೇಳಿಸಿಕೊಳ್ಳದವಳಂತೆ ತೆರೆಯ ಮೇಲಿನ ದೃಶ್ಯಗಳನ್ನು ನೋಡಬೇಕೆಂದು ಆಕೆ ಪ್ರಯತ್ನಿಸುತ್ತಿದ್ದಳು. ಗೈಡ್ ಕ್ಷಣ ಹೊತ್ತು ಕೂಡಾ ನಿಲ್ಲಿಸದಂತೆ ಸಿನಿಮಾವನ್ನು ವಿವರಿಸುತ್ತಿದ್ದ. 'ದಕ್ಷಿಣ ಒರಿಸ್ಸಾದ ಪುಟ್ಟ ಗ್ರಾಮ. ಆ ಊರಿನ ಕೊನೆಯಲ್ಲಿರುವ ಮಹಡಿಮನೆ. ಅದರಲ್ಲಿ ಸಾಯಲು ಸಿದ್ಧಳಾಗಿದ್ದ ಒಬ್ಬ ಹೆಂಗಸು. ಜಾಸ್ತಿ ವಯಸ್ಸೇನೂ ಇಲ್ಲ. ಐವತ್ತಿರಬಹುದು ಅಥವಾ